**ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಕೆ ಟಿ., ಪ್ರತಿವಾದಿ ಪರ ವಕೀಲರಿಂದ**

**2.** ವಾದಿ ಮತ್ತು ಪ್ರತಿವಾದಿಗಳು ನನಗೆ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ಆ ದಿನ ಸುಮಾರು ಬೆಳಿಗ್ಗೆ 11-12 ಗಂಟೆ ಅವಧಿಯಲ್ಲಿ ತಾಲೂಕು ಕಚೇರಿಗೆ ನನ್ನ ಸ್ವಂತ ಕೆಲಸದ ನಿಮಿತ್ತ ಹೋಗಿರುತ್ತೇನೆ. ಆ ದಿನ ಪಿ ಎಲ್ ಡಿ ಬ್ಯಾಂಕಿನ ಬಳಿ ಒಂದು ಮರದ ಕೆಳಗೆ ಅಚ್ಚು ಕಟ್ಟಾದ ರಸ್ತೆ ಇದ್ದು ಅಲ್ಲಿ ಕಟ್ಟೆ ಮೇಲೆ ಕುಳಿತುಕೊಂಡಿದ್ದರು. ನಾನು ತಾಲೂಕು ಕಚೇರಿಯಿಂದ ಕೆಲಸ ಮುಗಿಸಿ ಹೋಗುತ್ತಿದ್ದಾಗ ನನ್ನನ್ನು ನೋಡಿ ವಾದಿ ಕೃಷ್ಣ ಮೂರ್ತಿ ಕರೆದಿರುತ್ತಾರೆ. ನನ್ನನ್ನು ಕೆರದಂತಹ ಸಮಯದಲ್ಲಿ ಚೇತನ್ ರವರು ಪತ್ರ ಬರೆಯಲು ಕೂತಿದ್ದರು. ಪತ್ರ ಬರೆಯುವಾಗ ನಾನು ಅಲ್ಲಿಯೇ ಕೂತಿದ್ದೆನು. ನನ್ನ ಸಮಕ್ಷವು ಮಾರಾಟ ಮಾತುಕತೆ ಆಗಿಲ್ಲ ಎಂದರೆ ಸರಿ. ಪತ್ರ ಬರೆದು ಓದಿ ತಿಳಿಸಿರುತ್ತಾರೆ. ಪತ್ರವನ್ನು ಸುಮಾರು 11-12 ಗಂಟೆ ಅವಧಿಯಲ್ಲಿ ಬರೆದಿರುತ್ತಾರೆ. ಆ ದಿನ ನಾನು ಮೊದಲನೇ ಬಾರಿಗೆ ವಾದಿ ಕೃಷ್ಣಮೂರ್ತಿಯನ್ನು ಅಲ್ಲಿ ನೋಡಿರುತ್ತೇನೆ ಎಂದರೆ ಸರಿ.

**3.** ಪತ್ರವನ್ನು ಬರೆದು ಓದಿ ತಿಳಿಸಲಾಗಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯೂ ಮುಂದುವರೆದು ದುಡ್ಡು ಕೊಟ್ಟಾಗ ಅಲ್ಲಿಯೇ ಇದ್ದೆನು ಎಂದು ನುಡಿಯುತ್ತಾರೆ. ಹಣವನ್ನು ನಗದು ರೂಪದಲ್ಲಿ ಕೊಡಲಾಗಿದೆ. 500 ರೂ ಮುಖಬೆಲೆಯ 1 ಕಟ್ಟಿನಲ್ಲಿ 100 ರೂ ನೋಟುಗಳು ಇದ್ದ 38 ಕಟ್ಟುಗಳನ್ನು ಕೊಟ್ಟಿರುತ್ತಾರೆ. ನನ್ನ ಸಮಕ್ಷಮ ಎಣಿಕೆ ಮಾಡಿ ಕೊಟ್ಟಿದ್ದು ನಂತರ ಪ್ರತಿವಾದಿ ವಿಶ್ವನಾಥ ಕೂಡ ಎಣಿಕೆ ಮಾಡಿ ತೆಗೆದುಕೊಂಡಿರುತ್ತಾರೆ.

**4.** ಕ್ರಯದ ಕರಾರು ದಿನ ಮಾತುಕತೆ ನನ್ನ ಸಮಕ್ಷಮ ನಡೆದಿಲ್ಲ ಕೇವಲ ಮೇಲೆ ಹೇಳಿದಷ್ಟು ವ್ಯವಹಾರ ನಡೆದಿರುತ್ತದೆ ಎಂದರೆ ಸರಿ. ಕ್ರಯದ ಕರಾರು ಪತ್ರದಲ್ಲಿ ಕೃಷ್ಣ ಮೂರ್ತಿ ರವರು ಕೊಂಡುಕೊಳ್ಳುವವರು ಹಾಗೂ ವಿಶ್ವನಾಥ ಮಾರಾಟಗಾರರು ಎಂದು ನಮೂದು ಇರುತ್ತದೆ.

**5.** ವಾದಿ ಕೃಷ್ಣಮೂರ್ತಿ ಬಡ್ಡಿ ಹಾಗೂ ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು ಕೂಡ ಅದೇ ವ್ಯವಹಾರ ಮಾಡುತ್ತೇನೆಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ನಾನು, ವಾದಿ ಹಾಗೂ ಪತ್ರ ಬರಹಗಾರರು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ

ಸರಿಯಲ್ಲ. ನನ್ನ ಸಮಕ್ಷಮ ವಾದಿ ಕೃಷ್ಣ ಮೂರ್ತಿ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ಮುಂದೆ ಇದ್ದ ಒಂದು ಅಂಗಡಿಯಲ್ಲಿ ಟೈಪ್ ಮಾಡಿರುತ್ತಾರೆ. ನಾನು ಈಗಾಗಲೇ ಪತ್ರವನ್ನು ಚೇತನ್ ರವರು ಬರೆದರು ಎಂದು ಹೇಳಿದು ಬರೆದಿರುವುದು ನಿಜನಾ ಅಥವಾ ಟೈಪ್ ಮಾಡಿರುವುದು ನಿಜನಾ ಎಂದರೆ ಸಾಕ್ಷಿಯೂ ಟೈಪ್ ಮಾಡಿರುವುದು ನಿಜ ಎಂದು ನುಡಿಯುತ್ತಾರೆ.

6. ಪ್ರತಿವಾದಿಯ ಜಮೀನನ್ನು ಲಪಾಟಾಯಿಸುವ ಉದ್ದೇಶದಿಂದ ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.